ವಿಷಯ: ಮೈಸೂರು ನಗರದ ನರಸಿಂಹರಾಜ ಕ್ಷೇತ್ರದಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಮಂಜುರಾತಿ.

230(1472)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ನರಸಿಂಹರಾಜ ವಿಧಾನಸಭಾ ಕ್ಷೇತ್ರಕ್ಕೆ 1998-99ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡಲು ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಮಾರುತಿರಾವ್ ಇ. ಪವಾರ್: 1998-99ನೇ ಸಾಲಿನಲ್ಲಿ ಸರ್ಕಾರದವರು ಯಾವುದೇ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಕಳೆದ ವರ್ಷವೇ ಶ್ರೀ ಸೋಮಶೇಖರ್‌ರವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಮೈಸೂರಿನ ಸಿದ್ಧಾರ್ಥ ಬಡಾವಣೆಯ ವಸಂತ ಮಹಲ್‌ನಲ್ಲಿ ಕಾಲೇಜು ಪ್ರಾರಂಭ ಮಾಡಬೇಕೆಂದು, ಪತ್ರ ವ್ಯವಹಾರವಾಗಿ, ಪರಿಶೀಲನೆಯಾಗಿ ಮತ್ತೆ ಅದು ನಮ್ಮ ಉಪಮುಖ್ಯಮಂತ್ರಿಗಳಿಗೂ ಗೊತ್ತು, ಶ್ರೀ ಸೋಮಶೇಖರ್‌ರವರಿಗೂ ಗೊತ್ತು, ಆ ಕಾಲೇಜನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದಾಗ, ಮತ್ತೊಂದು ಕಾಲೇಜನ್ನು ಅಲ್ಲಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಇನ್ನೊಂದು ಕಾಲೇಜು ಕೊಡುವುದನ್ನು ಪರಿಶೀಲಿಸಲಾಗುತ್ತಿದೆ, ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿ ಹಿಂದುಳಿದ ಸಮಾಜದವರು ವಾಸಿಸುತ್ತಿದ್ದಾರೆ. ಅಲ್ಲಿ ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆ ಇದೆ. ಪರಿಶೀಲನೆ ಮಾಡಿ ತಕ್ಷಣದಲ್ಲಿ ಕಾಲೇಜು ಪ್ರಾರಂಭಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: 1998-99ನೇ ಸಾಲಿನಲ್ಲಿ ಕಾಲೇಜುಗಳನ್ನು ಕೊಡುವುದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಇಲ್ಲ, ಹಣವೂ ಇಲ್ಲ. ಈಗಾಗಲೇ ನಾನು ಎಂಟು ದಿವಸಗಳ ಹಿಂದೆಯೇ ಹೇಳಿದ್ದೇನೆ. ಅದೇ ಮಾತು ಈ ಪ್ರಶ್ನೆಗೂ

ಅನ್ವಯಿಸುತ್ತದೆ. ಪ್ರತಿ ಮೀಟಿಂಗನಲ್ಲೂ, ಪ್ರತಿಯೊಬ್ಬ ಶಾಸಕರೂ ಕೇಳುತ್ತಿದ್ದಾರೆ. ಸ್ಪಿಲ್ ಓವರ್ ವರ್ಕ್ಸ್‌ಗೇ ಹಣ ಸಾಕಾಗುತ್ತಿಲ್ಲ. ಈ ವರ್ಷ ಹೊಸ ಕಾಲೇಜುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಕುವೆಂಪು ಕಾಲೇಜು ಹತ್ತಿರದಲ್ಲಿದೆ. ಇದೊಂದು ವರ್ಷ ತಾವು ಸುಧಾರಿಸಿಕೊಂಡರೆ, ಮುಂದಿನ ವರ್ಷ ಪರಿಶೀಲನೆ ಮಾಡಬಹುದು.

ಶ್ರೀ ಮಾರುತಿರಾವ್ ಇ. ಪವಾರ್: ಕುವೆಂಪು ಕಾಲೇಜು ಹತ್ತಿರವಿಲ್ಲ. ಕಟ್ಟಡ ರೆಡಿ ಇದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಶ್ರೀ ಸೋಮಶೇಖರ್‌ರವರು ಕಾಲೇಜನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದರು. ಮೈಸೂರಿನ ಜನಸಂಖ್ಯೆ ಸುಮಾರು 12 ಲಕ್ಷವಿದೆ. ಆ ಕ್ಷೇತ್ರಕ್ಕೆ ಕಾಲೇಜು ಅವಶ್ಯಕ ಇದೆ. ಇದನ್ನು ಪರಾಂಭರಿಸಬೇಕೆಂದು ನಾನು ವಿದ್ಯಾ ಸಚಿವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್: ಸರ್ಕಾರಿ ಕಟ್ಟಡ ರೆಡಿ ಇದೆ. ಎಲ್ಲಾ ಸಲಕರಣೆಗಳೂ ಇವೆ. ಅದನ್ನು ಪ್ರಾರಂಭಿಸುವುದಕ್ಕೆ ತಾವು ಮನಸ್ಸು ಮಾಡಬೇಕು. ಉಪಮುಖ್ಯಮಂತ್ರಿಗಳು ಹಣ ಕೊಡುತ್ತೇವೆಂದು ಹೇಳಿದ್ದಾರೆ. ಸಚಿವರು ಮನಸ್ಸು ಮಾಡಬೇಕು.

ಶ್ರೀ ಹೆಚ್.ಜಿ.ಗೋವಿಂದೇಗೌಡ: ರಾಜ್ಯಾದ್ಯಂತ ಹಲವಾರು ಪ್ರಥಮದರ್ಜೆ ಕಾಲೇಜುಗಳ ಅವಶ್ಯಕತೆ ಇದೆ. ಅದು ನನಗೂ ಗೊತ್ತು. ನಮ್ಮ ಹಣದ ಪರಿಸ್ಥಿತಿಯನ್ನೂ ನೋಡಬೇಕಾಗಿದೆ. ಪ್ರಾಮಿಸ್ ಮಾಡಿ, ಹಿಂದೆ ಸರಿಯುವುದು ಬೇಡವೆಂದು ನಾನು ಹೇಳಿದೆ. ಈ ವರ್ಷಕ್ಕೆ ಆಗುವುದಿಲ್ಲವೆಂಬ ಭಾವನೆ ಇಟ್ಟುಕೊಳ್ಳಿ. ಬರುವ ವರ್ಷ ಹಣದ ಪರಿಸ್ಥಿತಿ ನೋಡಿಕೊಂಡು ಕನ್‌ಸಿಡರ್ ಮಾಡೋಣ. ಕೇವಲ ಮೈಸೂರಿಗೆ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜು ಕೊಡುವುದಕ್ಕೆ ಹಣವೇ ಇಲ್ಲ.

ಶ್ರೀ ಮಾರುತಿರಾವ್ ಇ. ಪವಾರ್: ಬರುವ ವರ್ಷವಾದರೂ ಪ್ರಾರಂಭಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಬರುವ ವರ್ಷ ಈ ದೇಶದಲ್ಲಿ ಯಾವ ಪರಿಸ್ಥಿತಿ ಇರುತ್ತದೆಂದು ನಾನು ಹೇಗೆ ಹೇಳಲಿ? ಈ ವರ್ಷಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು: ಈಗ ಹೇಳಿದ್ದುದು ಸತ್ಯ.

ವಿಷಯ: ಹಾಸನ ಜಿಲ್ಲೆಯಲ್ಲಿ ವಿಶ್ವಬ್ಯಾಂಕಿನ ನೆರವಿನಿಂದ ಕುಡಿಯುವ ನೀರಿನ ಯೋಜನೆ.